

ಥ್ರೆಡ್ ಸುತ್ತಿ ಚಂದದ ಮುತ್ತುಗಳನ್ನು ಜೋಡಿಸಿ ಪೆಂಡೆಂಟ್ ಇಡಲಾಗುತ್ತದೆ. ಯಾವುದೇ ಬೆಳ್ಳಿ, ಬಂಗಾರದ ಒಡವೆಗಳಿಗೆ ಕಡಿಮೆ ಇಲ್ಲದಂತೆ ಇವು ಕಂಗೊಳಿಸುತ್ತವೆ. ಕಾಟನ್ ಮತ್ತು ಖಾದಿ ಸೀರೆಗೆ ಇಂಥ ಒಡವೆ ಪರ್ಫೆಕ್ಟ್.

ಸಿಲ್ಕ್ ಥ್ರೆಡ್ ಕಿವಿಯೋಲೆಗಳಲ್ಲಿ ಹಲವಾರು ವೈವಿಧ್ಯ, ಬಣ್ಣ ಮತ್ತು ವಿನ್ಯಾಸಗಳಿವೆ. ಹ್ಯಾಂಗಿಂಗ್, ಸ್ಟಡ್ಸ್, ಹೂಪ್ಸ್, ಜುಮುಕಿ, ಲೋಲಾಕು ಮುಂಗುರುಳ ಹಿಂದೆ ಹೊಳೆಯತೊಡಗಿದರೆ ನೀವೇ 'ಸೆಂಟರ್ ಆಫ್ ಅಟ್ರಾಕ್ಷನ್' ಆಗುವುದರಲ್ಲಿ ಸಂಶಯವಿಲ್ಲ.

ಕಿವಿಯೋಲೆ ಆಯ್ಕೆ ಮಾಡುವಾಗ ಫಿನಿಶಿಂಗ್ ಮತ್ತು ಹರಳಗಳನ್ನು ನೋಡಿ ಖರೀದಿಸಿ. ಇಲ್ಲವಾದರೆ ದಾರದ ಅಂಟು ಬಿಟ್ಟುಕೊಂಡು ನೀವು ನಗೆಪಾಟಲಿಗೆ ಈಡಾಗುವ ಸಾಧ್ಯತೆ ಇದೆ. ಉಳಿದ ಆಭರಣಗಳ ಜೊತೆಗೆ ಕಿವಿಯೋಲೆ ಸೇರಿಸಿ ಇಡಬಾರದು. ಪ್ರತ್ಯೇಕವಾಗಿ ಟಿಶ್ಯೂ ಪೇಪರ್‌ನಲ್ಲಿ ಸುತ್ತಿ ಜ್ಯುವೆಲರಿ ಬಾಕ್ಸ್‌ನಲ್ಲಿಟ್ಟರೆ ಬಹಳ ದಿನ ಬಾಳಿಕೆ ಬರುತ್ತದೆ. ಸಿಲ್ಕ್ ಥ್ರೆಡ್ ಕಾಲ್ಗೆಜ್ಜೆಗಳು ಈಗಿನ ಕಾಸ್ಮೋಪಾಲಿಟನ್ ಹುಡುಗಿಯರಿಗೆ ಅಚ್ಚುಮೆಚ್ಚು. ಕೇವಲ ಬೆಳ್ಳಿಗೆ ಮಾತ್ರ ಸೀಮಿತವಾಗಿದ್ದ ಗೆಜ್ಜೆಗಳೀಗ ಇಷ್ಟವಾದ ಬಣ್ಣದಲ್ಲಿ ಲೈಟ್ ವೈಟ್ ಆಗಿ ಕಾಲಿನ ಅಂದ ಹೆಚ್ಚಿಸುತ್ತಿವೆ.

## ಸೀರೆಯ ಕುಚ್ಚು

ಅದೆಷ್ಟೇ ತರಹದ ಡ್ರೆಸ್‌ಗಳು ಬಂದರೂ ಮಹಿಳೆಯರಿಗೆ ಸೀರೆ ನೀಡುವ ಬಾಂಧವ್ಯವೇ ಬೇರೆ. ಸೀರೆ ಸಂಸ್ಕೃತಿಯ ಪ್ರತೀಕವಾಗಿ ಸಾವಿರ ವರ್ಷಗಳ ಇತಿಹಾಸ ಹೊಂದಿದೆ. ನಮ್ಮ ಅಜ್ಜಿಯ ಕಾಲದಿಂದಲೂ ಮದುವೆ ಸೀರೆಗೆ ಕುಚ್ಚು ಕಟ್ಟುವ ಆಚರಣೆ ಇತ್ತು. ರೇಷ್ಮೆ ಸೀರೆಯ ಸೆರಗಿನ ತುದಿಗೆ ಬಿಟ್ಟಿರುವ ದಾರಗಳನ್ನು ನೇಯ್ದು ಕುಚ್ಚು ಕಟ್ಟುತ್ತಿದ್ದರು. ಆದರೆ ಇತ್ತೀಚಿನ ದಶಕಗಳಲ್ಲಿ ಕೇವಲ ರೇಷ್ಮೆ ಸೀರೆಗೆ ಮಾತ್ರವಲ್ಲದೆ ಫ್ಯಾನ್ಸಿ, ಕಾಟನ್, ಜಾರ್ಜೆಟ್, ಶಿಫಾನ್ ಎಲ್ಲ ಬಗೆಯ ಸೀರೆಗೆ ರೇಷ್ಮೆ ದಾರಗಳನ್ನು ಬಳಸಿ ಪ್ರತ್ಯೇಕವಾಗಿ ಕುಚ್ಚು ನೇಯಲಾಗುತ್ತದೆ.



ಆನ್‌ಲೈನ್ ಶಾಪಿಂಗ್ ಸೈಟ್‌ಗಳಲ್ಲಿ ಹುಡುಕಾಡಿದರೆ ರೆಡಿ ಟು ಸ್ಟಿಚ್ ಮಾದರಿಯಲ್ಲಿ ಸೀರೆ ಕುಚ್ಚುಗಳು ಸಿಗುತ್ತವೆ. ಗಡಿಬಿಡಿಯಲ್ಲಿ ಶಾಪಿಂಗ್ ಮುಗಿಸಿ ಸಂಜೆಯ ಪಾರ್ಟಿ ಸಮಯಕ್ಕೆ ಹೊಸ ಸೀರೆಗೆ ಕುಚ್ಚು ಹೊಲಿದುಕೊಂಡು ಪಾರ್ಟಿ ಅಟೆಂಡ್ ಮಾಡುವ ಅವಕಾಶವಿದೆ. ನೂರಾರು ಬಗೆಯ ಸೀರೆ ಕುಚ್ಚುಗಳು ಲಭ್ಯವಿದ್ದು ಮುಖ್ಯವಾಗಿ ಬೇಬಿ ಕುಚ್ಚು, ಕ್ರೋಶಾ ಕುಚ್ಚು, ಎಂಬ್ರಾಯಿಡರಿ ಕುಚ್ಚುಗಳಿವೆ. ಮನೆಯಲ್ಲಿಯೇ ಬಿಡುವಿನ ಸಮಯದಲ್ಲಿ ದಾರಗಳನ್ನು ನೇಯ್ದು ಕುಚ್ಚು ತಯಾರಿಸಿ ಹಣ ಗಳಿಸಬಹುದು. ಯೂಟ್ಯೂಬ್ ಚಾನಲ್‌ಗಳಲ್ಲಿ ಕಲಿತುಕೊಳ್ಳಬಹುದು.

## ಕ್ರೋಚೆಟ್ ಒಡವೆಗಳು

ಕೇವಲ ಒಂದು ಕಡ್ಡಿಯಿಂದ ಹೆಣೆಯುವ ಕ್ರೋಚೆಟ್ ಒಡವೆಗಳ ಸೊಬಗು ವರ್ಣನಾತೀತ. ಕ್ರೋಶಾ ಕಡ್ಡಿ ಬಳಸಿ ದಾರದ ಕೊಂಡಿಗೆ ದಾರ ನೇಯ್ದು ಮಧ್ಯದಲ್ಲಿ ಬೀಡ್ಸ್, ಮುತ್ತು, ಕುಂದನ್‌ಗಳನ್ನು ಜೋಡಿಸಲಾಗುತ್ತದೆ. ಇಕೊ ಫ್ರೆಂಡ್ಲಿ ಆಗಿರುವ, ಧರಿಸಲು ಮತ್ತು ಹಣ ಎರಡಕ್ಕೂ ಕ್ರೋಚೆಟ್ ಒಡವೆಗಳು ಉತ್ತಮ ಆಯ್ಕೆ. ಕ್ರೋಚೆಟ್ ಕಿವಿಯೋಲೆ, ಬಳೆ, ಹೇರ್ ಆಕ್ಸೆಸರೀಸ್, ಆ್ಯಂಕ್ಲೆಟ್, ನೆಕ್ಲೇಸ್, ಪೆಂಡೆಂಟ್‌ಗಳಲ್ಲದೆ ಕ್ರೋಚೆಟ್ ಡ್ರೆಸ್ ಮತ್ತು ಬ್ಯಾಗ್‌ಗಳೂ ಮಾರುಕಟ್ಟೆಯಲ್ಲಿ ರಾರಾಜಿಸುತ್ತಿವೆ.

ಕೂದಲಿಗೆ ಬಳಸುವ ಹೇರ್ ಕ್ಲಿಪ್, ಹೇರ್ ಬ್ಯಾಂಡ್, ಕ್ರೌನ್, ಬನ್ ಕವರ್, ಬ್ರೂಚ್, ರಬ್ಬರ್ ಬ್ಯಾಂಡ್, ಹೇರ್ ಸ್ಪೈರಲ್ ಕೂದಲಿಗೆ ಯಾವುದೇ ಹಾನಿ ಮಾಡದೆ ಬೆಸ್ಟ್ ಹೇರ್ ಸ್ಟೈಲ್ ನೀಡುತ್ತದೆ. ಪುಟ್ಟ ಮಕ್ಕಳ ಡ್ರೆಸ್, ಮಕ್ಕಳಿಗೆ ಇಷ್ಟವಾಗುವಂತಹ ಹೇರ್ ಕ್ಲಿಪ್, ಹೇರ್ ಬ್ಯಾಂಡ್, ಬರ್ತ್‌ಡೆ ಕ್ರೌನ್‌ಗಳಿಗೆ ತುಂಬಾ ಬೇಡಿಕೆ ಇದೆ. ಸಣ್ಣ ಮಕ್ಕಳಿಗಾಗಿ ಸ್ವೆಟರ್, ಕೈಗವಸು, ಟೊಪ್ಪಿ, ಸಾಕ್ಸ್, ಗೊಂಬೆಗಳನ್ನು ತಯಾರಿಸುತ್ತಾರೆ. ಕ್ರೋಚೆಟ್ ನೆಕ್ಲೇಸ್, ಪೆಂಡೆಂಟ್‌ಗಳು ಆಯಾ ಡ್ರೆಸ್‌ಗಳಿಗೆ ಮ್ಯಾಚಿಂಗ್ ಮಾಡಿ ಧರಿಸಲು ಅನುಕೂಲಕರ. ಇನ್ನು ತ್ರೀ ಫೋರ್ತ್ ಪ್ಯಾಂಟ್ ಅಥವಾ ಲೆಗಿಂಗ್ಸ್ ಧರಿಸಿದಾಗ ಕ್ರೋಚೆಟ್ ಆ್ಯಂಕ್ಲೆಟ್ ಸ್ಪೆಷಲ್ ಆಗಿ ಕಾಣಿಸುವಂತೆ ಮಾಡುತ್ತದೆ.

## ಕರಕುಶಲದ ಅಂದ

ಮನೆಯ ಒಳಾಂಗಣ ವಿನ್ಯಾಸಕ್ಕಾಗಿ ಉಲ್ಲನ್ ದಾರದ ಕರಕುಶಲಗಳು ಪ್ರಸಿದ್ಧಿ ಪಡೆದಿವೆ. ಬೀನ್ ಬ್ಯಾಗ್, ಬಾಗಿಲು ತೋರಣ, ಟೇಬಲ್ ಕವರ್, ಲ್ಯಾಂಪ್ ಶೇಡ್ ಕವರ್, ವಾಲ್ ಹ್ಯಾಂಗಿಂಗ್, ಡೋರ್ ಮ್ಯಾಟ್, ಪಿಲ್ಲೊ ಕವರ್, ಉಲ್ಲನ್ ಫ್ಲವರ್ ಪಾಟ್ ಮನೆಯ ಅಂದ ಹೆಚ್ಚಿಸುತ್ತವೆ. ಉಲ್ಲನ್ ದಾರದ ಬಾಗಿಲು ತೋರಣ, ವಾಲ್ ಹ್ಯಾಂಗಿಂಗ್ ಮನೆಯ ಮುಂಬಾಗಿಲನ್ನು ಅಲಂಕರಿಸುತ್ತದೆ. ಬಣ್ಣ ಮಾಸಿದ ಹಳೆಯ ಫರ್ನಿಚರ್ ಇದ್ದರೂ ಕಡಿಮೆ ಖರ್ಚಿನಲ್ಲಿ ಉಲ್ಲನ್ ದಾರದ ಕವರ್‌ಗಳಿಂದ ಹೊಸತಿನಂತೆ ಕಾಣುತ್ತದೆ.

- ಡೈನಿಂಗ್ ಟೇಬಲ್ ಮಧ್ಯದಲ್ಲಿ ಉಲ್ಲನ್ ದಾರದ ಫ್ಲವರ್ ಜೋಡಿಸಿಟ್ಟರೆ ಡೈನಿಂಗ್ ಹಾಲ್ ಚಂದ ಕಾಣುತ್ತದೆ.
- ಬೆಡ್ ಲ್ಯಾಂಪ್ ಕಲರ್ ಚೇಂಜ್ ಮಾಡಬಯಸುವಿರಾದರೆ ನಿಮಗಿಷ್ಟವಾದ ಬಣ್ಣದ ಉಲ್ಲನ್ ಲ್ಯಾಂಪ್ ಶೇಡ್ ಕವರ್ ಹಾಕಬಹುದು.
- ಒಂದಿಷ್ಟು ಸೃಜನಶೀಲತೆ ಮತ್ತು ಕಲಾನೈಪುಣ್ಯತೆ ಇದ್ದರೆ ದಾರದ ಎಳೆಗಳಿಂದ ಅದ್ಭುತ ಕರಕುಶಲ ವಸ್ತುಗಳನ್ನು ಸೃಷ್ಟಿಸಬಹುದು.